O.S.No. 329/2015
PW -2

ದಿನಾಂಕ 22/06/2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು

ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.

**ಪಾಟೀ ಸವಾಲು :- ಶ್ರೀ ಜಿ.ಬಿ.ಹೆಚ್ ಪ್ರತಿವಾದಿ ಪರ ವಕೀಲರಿಂದ**

ನಾನು ಸಿದ್ದನಹಳ್ಳಿಯಲ್ಲಿ 45 ವರ್ಷಗಳಿಂದ ವಾಸ ಇರುತ್ತೇನೆ. ಮಲ್ಲಿಕಾರ್ಜುನಯ್ಯ ಹಿಂದೂಪುರದಲ್ಲಿ ಖಾಯಂ ವಾಸ ಎಂದರೆ ಸರಿ. ಸಾಕ್ಷಿ ಮದುವೆ ಆದಾಗಿನಿಂದ 5 ವರ್ಷಗಳಿಂದ ನಮ್ಮ ಊರಿನಲ್ಲಿ ವಾಸ ಇರುತ್ತಾರೆ ಎಂದು ಉತ್ತರಿಸಿರುತ್ತಾರೆ. ವಾದಿಯ ಹೆಂಡತಿ ಮಕ್ಕಳ ಹೆಸರು ನನಗೆ ಗೊತ್ತಿರುವುದಿಲ್ಲ. ವಾದಿ ಚಿಕ್ಕವಯಸ್ಸಿನಲ್ಲಿ ಅವರ ಅತ್ತೆ ಮನೆಯಲ್ಲಿ ವಾಸ ಇದ್ದ ಎಂದರೆ ಸರಿಯಲ್ಲ. ವಾದಿಯು ಎಂದೂ ಸಿದ್ದನಹಳ್ಳಿಯಲ್ಲಿ ವಾಸ ಇಲ್ಲ ಎಂದರೆ ಸರಿಯಲ್ಲ. ವಾದಿ ನಮ್ಮ ಊರಿನಲ್ಲಿ ವಾಸ ಇರುವುದಿಲ್ಲ ಎಂದರೆ ಸರಿಯಲ್ಲ. ಸಿದ್ದನಹಳ್ಳಿ ಸಣ್ಣ ಊರು ಎಂರದೆ ಸರಿ. ನನಗೆ ಪ್ರತಿವಾದಿಯ ಪರಿಚಯ ಇರುತ್ತದೆ. ವಾದಿ ನನ್ನನ್ನು ಈ ಕೇಸಿಗಾಗಿ ಸಾಕ್ಷ್ಯ ನುಡಿಯಲು ಕರೆದುಕೊಂಡು ಬಂದಾಗ ನನಗೆ ಪರಿಚಯ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸರ್ವೆ ನಂಬರ್ ನನಗೆ ಗೊತ್ತಿಲ್ಲ , ಆದರೆ ವಿಸ್ತೀರ್ಣ ಗೊತ್ತಿರುತ್ತದೆ. ದಾವಾ ಆಸ್ತಿಯ ಅಕ್ಕ ಪಕ್ಕದವರ ಜಮೀನಿನ ವಿಸ್ತೀರ್ಣ ಮತ್ತು ಚಕ್ಕುಬಂದಿ ಹೇಳಲು ಆಗುವುದಿಲ್ಲ. ದಾವಾ ಆಸ್ತಿಯ ಪಕ್ಕ ನನ್ನ ಜಮೀನು ಇಲ್ಲ ಎಂದರೆ ಸಾಕ್ಷಿ ಒಂದೇ ಊರಿನವರು ಎಂದು ಉತ್ತರಿಸಿರುತ್ತಾರೆ.

2. ವಾದಿಯ ತಂದೆಗೆ ಮೂರು ಜನ ಅಣ್ಣ ತಮ್ಮಂದಿರು ಇರುತ್ತಾರೆ. ವಾದಿಯ ತಂದೆ ಅಣ್ಣ ತಮ್ಮಂದಿರ ನಡುವೆ ಭಾಗ ಆಗಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಗಂಗಪ್ಪ ಅವರ ಅಣ್ಣ ತಮ್ಮಂದಿರಿಗೆ 2 ಕಾಲು ಎಕರೆ ಜಮೀನು ಇರುತ್ತದೆ. ದಾವಾ ಆಸ್ತಿಗಳಲ್ಲಿ ಬಗರ್ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿ 2 ರಿಂದ 5 ನ್ನು ವಾದಿಯ ತಂದೆ ಖರೀದಿ ಮಾಡಿರುತ್ತಾರೆ. ವಾದಿಯ ತಂದೆ

ಹೋಟೆಲ್ ಇಟ್ಟಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಕಾಫಿ ಮಾಡುತ್ತಿದ್ದರು ಎಂದು ಉತ್ತರಿಸಿರುತ್ತಾರೆ. ವಾದಿಯ ತಂದೆಗೆ ಹೋಟೆಲ್ ನಿಂದ ಆದಾಯ ಬರುತ್ತಿತ್ತು ಎಂದರೆ ಸರಿ. ವಾದಿ ತಂದೆ ಕಟ್ಟಿಗೆ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಹೋಟೆಲ್ ಆದಾಯದಿಂದ ದಾವಾ ಆಸ್ತಿ 2 ರಿಂದ 5 ಖರೀದಿಸಿರುತ್ತಾರೆ ಎಂದರೆ ಸರಿ. ಗಂಗಪ್ಪನಿಗೆ 4 ಜನ ಹೆಣ್ಣು ಮಕ್ಕಳು 3 ಜನ ಗಂಡು ಮಕ್ಕಳು ಎಂದರೆ ಸರಿ. ಗಂಗಪ್ಪ ಬದುಕಿದ್ದ ಕಾಲಕ್ಕೆ ಇಬ್ಬರು ಹೆಣ್ಣು ಮಕ್ಕಳು ಮದುವೆ ಮಾಡಿದ್ದು ನಂತರ ಉಳಿದವರ ಮದುವೆ ಆಗಿರುತ್ತದೆ ಎಂದರೆ ಸರಿ. ವಾದಿ ಹಿಂದೂಪುರದಲ್ಲಿದ್ದ ಕಾರಣ 1 ನೇ ಪ್ರತಿವಾದಿ ತನ್ನ ತಂದೆ ತಾಯಿಂದಿರನ್ನು ನೋಡಿಕೊಳ್ಳುತ್ತಿದ್ದ ಎಂದರೆ ಸರಿ. ಪ್ರತಿವಾದಿಯರು ದಾವಾ ಆಸ್ತಿಗಳಲ್ಲಿ ಬೋರ್ ವೆಲ್ ಹಾಕಿಸಿ ಫಲವತ್ತಾದ ಭೂಮಿಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸುತ್ತಾ ಮುತ್ತಲಿನ ಜಮೀನುಗಳ ಚಕ್ಕುಬಂದಿ ನನಗೆ ಹೇಳಲು ಆಗುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತಿನ ಸರ್ವೆ ನಂಬರ್ ಗಳನ್ನು ವಾದಿ ನನಗೆ ಹೇಳಿಕೊಟ್ಟಿರುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ವಾದಿ ಬರೆಸಿರುತ್ತಾರೆ ಎಂದರೆ ಸರಿ .

3. ದಾವಾ ಆಸ್ತಿಗಳನ್ನು 2 ರಿಂದ 5 ಆಸ್ತಿಗಳನ್ನು ನಂಜಪ್ಪ ಮತ್ತು ಚಂದ್ರ ಶೇಖರ್ ರವರು ವಿಲ್ ನಾಮೆಮುಖಾಂತರ ತಾವು ಪ್ರತ್ಯೇಕವಾಗಿ ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ. ವಾದಿ ದಾವಾ ಆಸ್ತಿ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ವಾದಿಯ ನಡುವೆ ಹಣ ಕಾಸಿನ ವ್ಯವಹಾರ ಇದೆ ಎಂದರೆ ಸರಿಯಲ್ಲ. ವಾದಿ ಎಂದಿಗೂ ವ್ಯವಸಾಯ ಮಾಡಿಲ್ಲ ಎಂದರೆ ಸರಿಯಲ್ಲ. ವಾದಿ 5 ವರ್ಷಗಳಿಂದ ಜಮೀನಿನಲ್ಲಿ ಕೂಲಿ ರವರ ಮುಖಾಂತರ ಸಾಗುವಳಿ ಮಾಡಿಸುತ್ತಾ ಇರುತ್ತಾನೆ. ಯಾವ ರೀತಿ ಸಾಗುವಳಿ ಮಾಡುತ್ತಾನೆಂದು ನನಗೆ ಹೇಳಲು ಆಗುವುದಿಲ್ಲ. ಆದರೆ 2015 ರಿಂದ ಸಾಗುವಳಿ ಮಾಡುತ್ತಾ ಇರುತ್ತಾನೆ. ವಾದಿ ನನ್ನನ್ನು ಸಾಕ್ಷ್ಯ ಹೇಳಲು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾನೆ ಎಂದರೆ ಸರಿ.

ನನಗೆ ವಾದಿಯ ಕುಟುಂಬದ ವಿಚಾರ ನನಗೆ ಏನು ಗೊತ್ತಿಲ್ಲದೇ ಇದ್ದರೂ ವಾದಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ

ಮರು ವಿಚಾರಣೆ ಇಲ್ಲ.

(ತೆ ನ್ಯಾ ನ ಉ ಲೇ ಬೆ ಮಾ )

ಓ ಹೇ ಕೇ ಸ ಇ ಎ ಒ

( ರಘುನಾಥ ಗೌಡ ಕೆ.ಟಿ. )
ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ